
ಅವಳೇಕೆ ಹಾಗೆ ದಿಟ್ಟಿಸಿ ನೋಡುತ್ತಿದ್ದಾಳೆ? ಹೃದಯವನ್ನೇ ಕಿತ್ತು ತಿನ್ನುವ ಹಾಗೆ? ಓ! ಅವನು ಅದನ್ನು ಲೆಕ್ಕಿಸದೆ ಪುಸ್ತಕದ ಪುಟಗಳಲ್ಲಿ ಮತ್ತೊಮ್ಮೆ ಕಣ್ಣೋಡಿಸಿದ. ತುಂಬಾ ಹೊತ್ತು ಕಳೆದು ಮೈದಾನದಲ್ಲಿ ದೂರಕ್ಕೆ ದೃಷ್ಟಿಹಾಯಿಸಿದ. ದಿಗಂತದ ವರೆಗೆ ಏನೂ ಇಲ್ಲ. ಆದರೂ ಆ ದಿಕ್ಕಿಗೆ ನೋಡಲು ಸಾಧ್ಯವಾಗುತ್ತಿಲ್ಲ. ಸೂರ್ಯ ಪ್ರಕಾಶ ಹೊಳೆಯುವ ನೆರಳಿನಂತೆ ಭೀಕರವಾಗಿ ಅಲೆಯೆಬ್ಬಿಸುತ್ತಿದೆ. ಸ್ವಲ್ಪ ಕುತೂಹಲದಿಂದ ಆತ ಇನ್ನೊಮ್ಮೆ ಹಿಂತಿರುಗಿ ನೋಡಿದ.

ಅವಳಿನ್ನೂ ಹೋಗಿಲ್ಲ!

ಆತನನ್ನೇ ನೋಡುತ್ತ ದಾರಿಬದಿಯಲ್ಲಿ ನಿಂತಿದ್ದಾಳೆ.



ಗಲ್ಲಿಯ ತುದಿಯಲ್ಲಿ ಕುತೂಹಲ ಹುಟ್ಟಿಸುವ ಮೈಕೈ ತುಂಬಿದ ಆಕೃತಿ. ರೋಜಾ ಬಣ್ಣದ ಸೀರೆಯ ಒಳಗೆ ಬ್ರಾ ಮಾತ್ರ. ಬಿಳಿಯೊ ಕಪ್ಪೋ... ಸರಿಯಾಗಿ ಗುರುತಿಸಲು ಸಾಧ್ಯವಾಗುತ್ತಿಲ್ಲ. ಮುಖ ದುಂಡಗಿದೆ... ಅಗಲ ಕಿರಿದಾದ ಹಣೆ. ಬಹಳ ಹೊತ್ತು ಅತ್ತುದಕ್ಕೆ ಸಾಕ್ಷಿಯಾದ ಅವಳ ಕಣ್ಣುಗಳು. ವೃತ್ತಾಕಾರದ ಚಿನ್ನದ ಮೂಗುತಿ ಒಂದು ಭಾಗದಲ್ಲಿ ಅಂಟಿಕೊಂಡು ಹೊಳೆಯುತ್ತಿದೆ. ಮತ್ತೆ ಮತ್ತೆ ಕೂದಲನ್ನು ಬಿಚ್ಚುತ್ತಾ ಕಟ್ಟುತ್ತಾ ಅವಳೇಕೆ ಕಂಕುಳಿನ ರೋಮವನ್ನು ತೋರಿಸುತ್ತಿದ್ದಾಳೆ. ಯೌವನದ ತುಂಟತನ ಪ್ರತಿಯೊಂದು ಚಲನವಲನಗಳಲ್ಲೂ ಸ್ಪಷ್ಟ. ಆ ದೊಡ್ಡ ಮೊಲೆಗಳು, ದಪ್ಪ ನಿತಂಬಗಳು ಮನಸ್ಸನ್ನು ಅಲ್ಲೋಲ ಕಲ್ಲೋಲಗೊಳಿಸುತ್ತಿವೆ! ನರನಾಡಿಗಳಲ್ಲಿ ಬಿಸಿಯೇರುತ್ತಿದೆ. ಹೇಳಲಾರದ ಮೋಹವೊಂದು ಎದೆಯಲ್ಲುದಿಸುತ್ತಿದೆ. ಅವಳೊಂದು ಬಯಕೆಯಾಗಿ ಬದಲಾಗುತ್ತಿದ್ದಾಳೆ. ಅವಳನ್ನು ಬಿಗಿದಪ್ಪಿ ಹೃದಯದೊಳಗೆ ಸೇರಿಸಿ ಪುಡಿಮಾಡುವ, ಮುತ್ತಿಡುವ ಆಸೆಗೆ ಬಲ ಹೆಚ್ಚುತ್ತಿದೆ. ಅನ್ಯ ಪುರುಷನೊಬ್ಬ ಅನ್ಯಸ್ತ್ರೀಯೊಂದಿಗೆ... ಕೂಡದು. ಹಾಗಿದ್ದೂ ಅವನು ಗಮನ ಹರಿಸದೆ ನಡೆದುಕೊಂಡೇ ಹೋದ. ಹಿಂತಿರುಗಿ ನೋಡಿದರೆ ಬಯಕೆ ಎಲ್ಲಾದರೂ ಗುಲಾಮನನ್ನಾಗಿಸಿ ಬಿಟ್ಟರೆ...

ಮರುದಿನವೂ ಆತ ಅಲ್ಲಿಗೆ ಹೋದ. ಅವಳನ್ನು ಕಾಣುವುದಕ್ಕಲ್ಲವಾದರೂ, ಅಲ್ಲಿ ಆ ದಾರಿಯ ಬದಿಯ ಮೈದಾನದ ಸಮೀಪವಿರುವ ಬೆಂಚುಗಳಲ್ಲೊಂದರಲ್ಲಿ ಆತ ಕುಳಿತ. ಆ ಕಡೆಗೆ ನೋಡಬಾರದೆಂದು ನಿರ್ಧರಿಸಿದ್ದನಾದರೂ ಆ ಕಡೆಗೆ ಒಂದು ನೂರು ಬಾರಿಯಾದರೂ ನೋಡಿದ.

ಅವಳು ಕಾಣಿಸಲಿಲ್ಲ.